KAMS510050382014

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 08 ನೇ ಜುಲೈ , 2026**

**ಸಿ.ಸಿ./2003/2014**

| | |
|---|---|
| ಪಿರ್ಯಾದುದಾರರು | ರಾಜ್ಯದ ಪರವಾಗಿ<br>ಬದನವಾಳು ಠಾಣಾ ಪೊಲೀಸರು.<br>**(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)** |
| | **ವಿರುದ್ಧ** |
| ಆರೋಪಿ- | ರಸೂಲ್ ಸಾಬ್ ಬಿನ್ ರಾಜೇ ಸಾಬ್ ಚೆಬ್ಬಿ 30 ವರ್ಷ<br>ವಾಸಃಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಹೆಬ್ಬಾಳ ಗ್ರಾಮ ಶಿರಹಟ್ಟಿ ಗದಗ ಜಿಲ್ಲೆ<br>**(ಆರೋಪಿ ಪರ ಪ್ರತಿನಿಧಿಸುವವರು ಶ್ರೀ.ಆರ್ ಎಂ ಎಸ್ ., ವಕೀಲರು)** |

| | |
|---|---|
| ಅಪರಾಧ ನಡೆದ ದಿನಾಂಕ | 18.05.2014 |
| ಫಿರ್ಯಾದಿ ನೀಡಿದ ದಿನಾಂಕ | **18.05.2014** |
| ಪಿರ್ಯಾದಿ ಹೆಸರು | ಮಹೇಶ |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 17.02.2021 |
| ಸಾಕ್ಷಿ ವಿಚಾರಣೆ ಮುಕ್ತಯವಾದ ದಿನ | 02.06.2026 |
| ತೀರ್ಪಿನ ದಿನಾಂಕ | 08.07.2026 |
| ಪಿರ್ಯಾದುದಾರರ ವಿರುದ್ಧ ಇರುವ ಆಪಾದನೆ | ಭಾ.ದಂ.ಸಂ.ಕಲಂ 279 ಮತ್ತು 304-ಎ ರಡಿಯಲ್ಲಿ |
| ನ್ಯಾಯಾಧೀಶರ ಅಭಿಪ್ರಾಯ | ಆಪಾದಿತನು ತಪ್ಪಿತಸ್ಥನಲ್ಲವೆಂದು |

## -:: ತೀರ್ಪು ::-

ಬದನವಾಳು ಪೊಲೀಸ್ ಠಾಣೆಯ ಆರಕ್ಷಕರ ಉಪನಿರೀಕ್ಷಕರು, ಇವರು ಆರೋಪಿ ರವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.279 ಮತ್ತು 304-ಎ ರಡಿಯಲ್ಲಿ ಅಡಿಯಲ್ಲಿ ಅಪರಾಧವೆಸಗಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ದೋಷಾರೋಪಣಾ ಪಟ್ಟಿಯಲ್ಲಿ ಮಂಡಿಸಿದ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ**

ದಿನಾಂಕ:18.05.2014 ರಂದು 17:00 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನಂಜನಗೂಡು ಚಾಮರಾಜನಗರ ಮುಖ್ಯ ರಸ್ತೆ ಮಹದೇವನಗರ

ಗ್ರಾಮದ ಹತ್ತಿರ ರಾಜಣ್ಣ ಎಂಬುವರು ತಮ್ಮ ಬಾಬು ಕೆಎ-09 ಇಡಬ್ಲ್ಯೂ-8515 - ಟಿವಿಎಸ್ ಎಕ್ಸಲ್ ಸೂಪರ್ ಮೊಪೆಡ್ ನಲ್ಲಿ ಚಾಮರಾಜನಗರ ಕಡೆಯಿಂದ ನಂಜನಗೂಡಿನ ಕಡೆಗೆ ರಸ್ತೆ ಎಡಭಾಗ ಬರುತ್ತಿದ್ದಾಗ ಆರೋಪಿಯು ತಮ್ಮ ಬಾಬ್ತು ಕೆಎ-09 ಎಫ್-3350 ಕೆಎಸ್ಆರ್‌ಟಿಸಿ ಬಸ್ಸನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಮೊಪೆಡ್ ಗೆ ಡಿಕ್ಕಿ ಮಾಡಿದ ಪರಿಣಾಮ ರಾಜಣ್ಣ ಎಂಬುವರಿಗೆ ತಲೆ ಹಾಗೂ ಕೈ, ಕಾಲುಗಳಿಗೆ ತೀವ್ರತರನಾದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿರುವುದು ತನಿಖೆಯಿಂದ ದೃಢಪಟ್ಟಿದ್ದು, ಬದನವಾಳು ಪೊಲೀಸ್ ಠಾಣೆಯ ಆರಕ್ಷಕರ ಉಪನಿರೀಕ್ಷಕರು ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ತನಿಖಾಧಿಕಾರಿಗಳು ತನಿಖೆ ಕಾರ್ಯವನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು ನ್ಯಾಯಾಲಯ ಭಾ.ದಂ.ಸಂ.ಕಲಂ. 279 ಮತ್ತು 304-ಎ ರಡಿಯಲ್ಲಿ ಅಡಿಯಲ್ಲಿ ರಂತೆ ಅಪರಾಧಗಳಿಗೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತಾರೆ.

4. ನ್ಯಾಯಾಲಯದ ಸಮನ್ಸ್ ಗಳು ಆರೋಪಿಗೆ ಜಾರಿಯಾದ ನಂತರ ಆರೋಪಿ ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಪಡೆದುಕೊಂಡಿರುತ್ತಾರೆ. ಈ ನ್ಯಾಯಾಲಯವು ದಂಡ ಪ್ರಕ್ರಿಯ ಸಂಹಿತೆ 207 ರಂತೆ ಆರೋಪಿಯ ದೋಷಾರೋಪಣೆ ಪಟ್ಟಿಯ ನಕಲನ್ನು ಜಾರಿಗೊಳಿಸಲಾಗಿದೆ.

5. ಆರೋಪಿ ವಿರುದ್ಧ ಭಾ.ದಂ.ಸಂ. 279 ಮತ್ತು 304-ಎ ಅಡಿಯಲ್ಲಿ ಆರೋಪಿಗೆ ಆಪಾದನೆಗಳನ್ನು ಅವರ ವಿರುದ್ಧ ರಚಿಸಿ ಓದಿ ವಿವರಿಸಿ ಹೇಳಿದ್ದು ಆರೋಪಿ ತಾನು ತಪ್ಪು ಮಾಡಿಲ್ಲ ಮತ್ತು ಅಪರಾಧಗಳಿಗೆ ಪ್ರತಿರಕ್ಷೆ ಇಲ್ಲ ಎಂದು ತಿಳಿಸಿರುತ್ತಾರೆ.

6. ಅಭಿಯೋಜನೆಯ ಪಕ್ಷದವರು ಆರೋಪಿ ವಿರುದ್ಧ ಮಾಡುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಪ್ರಾ.ಸಾ.1 ರಿಂದ 7 ರವರನ್ನು ವಿಚಾರಣೆಗೆ ಒಳಪಡಿಸಿದ್ದು, ನಿಶಾನೆ ಪಿ.1 ರಿಂದ ಪಿ.16 ರವರೆಗೆ ದಾಖಲೆಗಳನ್ನು ಗುರುತಿಸಿಕೊಳ್ಳಲಾಗಿದೆ. ಅಭಿಯೋಜನೆಯ ಪಕ್ಷದವರ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂ.ಪ್ರ.ಸಂ.ಕಲಂ 313 ರ ಅಡಿಯಲ್ಲಿ ಆರೋಪಿ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿ ಅಭಿಯೋಜನೆ ಪಕ್ಷದವರ ಪರವಾಗಿ ಮಾಡಿಸಿಕೊಂಡ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗೆಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಮೌಖಿಕ ಮತ್ತು ಲಿಖಿತ ಸಾಕ್ಷಿ ವಿಚಾರಣೆ ಇರುವುದಿಲ್ಲ ಎಂದು ಮತ್ತು ಅಭಿಯೋಜನೆಯ ಆಪಾದನೆಗಳನ್ನು ಸಂಪೂರ್ಣವಾಗಿ ಅಲ್ಲಗೆಳೆದಿರುತ್ತಾರೆ.

7. ನಂತರ ಅಭಿಯೋಜನೆಯ ಪಕ್ಷದವರ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರು ಮಂಡಿಸಿದ ವಾದ ವಿವಾದಗಳನ್ನು ಆಲಿಸಲಾಗಿದ್ದು ಮತ್ತು ಕಡತದಲ್ಲಿ ಲಭ್ಯವಿರುವ ನಕಲುಗಳನ್ನು ಪರಿಶೀಲಿಸಲಾಗಿದೆ.

8. ನಂತರ ಪ್ರಕರಣದ ಸ್ಥಿತಿ ಮತ್ತು ಸಂಧರ್ಭಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

1. ಅಭಿಯೋಜನೆ ಪಕ್ಷದವರು ದಿನಾಂಕಃ ದಿಃ18.05.2014 ರಂದು ಸಂಜೆ 5 ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ನಂಜನಗೂಡು - ಚಾಮರಾಜನಗರ ಮುಖ್ಯ ರಸ್ತೆ ಮಹದೇವನಗರ ಗ್ರಾಮದ ಹತ್ತಿರ ರಾಜಣ್ಣ ಎಂಬುವರು ತಮ್ಮ ಬಾಬ್ತು ಕೆಎ-09-ಇಡಬ್ಲೂ-8515 ಟಿವಿಎಸ್ ಎಕ್ಸಲ್ ಸೂಪರ್ ಮೊಪೆಡ್‌ನಲ್ಲಿ ಚಾಮರಾಜನಗರ ಕಡೆಯಿಂದ ನಂಜನಗೂಡಿನ ಕಡೆಗೆ ರಸ್ತೆ ಎಡಭಾಗ ಬರುತ್ತಿದ್ದಾಗ ಆರೋಪಿಯು ತಮ್ಮ ಬಾಬ್ತು ಕೆಎ-09-ಎಫ್-3350 ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆಮಾಡಿ ಮೊಪೆಡ್‌ಗೆ ಡಿಕ್ಕಿ ಮಾಡಿದ್ದು, ಅದರ ಚಾಲಕನಾದ ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದು ಆ ಪ್ರಕಾರ ಭಾ.ದಂ.ಸಂ.ಕಲಂ 279 ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸಿರುತ್ತಾರೆಯೇ?

ಅಂಶ-2: ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯು ಮೇಲೆ ಹೇಳಿದ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿ ವೇಗವಾಗಿ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, ಆರೋಪಿಯು ಬಸ್ಸನ್ನು ಮೊಪೆಡ್‌ಗೆ ಡಿಕ್ಕಿ ಮಾಡಿದ ಪರಿಣಾಮ ರಾಜಣ್ಣ ಎಂಬುವರಿಗೆ ತಲೆ ಹಾಗೂ ಕೈ, ಕಾಲುಗಳಿಗೆ ತೀವ್ರತರವಾದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ಆದ್ದರಿಂದ, ಭಾ.ದಂ.ಸಂ.ಕಲಂ.304-ಎ ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂಬುದನ್ನು ಅಭಿಯೋಜನೆ ಪಕ್ಷದವರು ಸಂಶಯಾತೀತವಾಗಿ ರುಜುವಾತುಪಡಿಸಿರುತ್ತಾರೆಯೇ?

ಅಂಶ-3: ಏನು ಆದೇಶ?

9. ಈ ನ್ಯಾಯಾಲಯದ ಪರಗಣನೆಗೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ -1 : ನಕಾರಾತ್ಮಕವಾಗಿ

ಅಂಶ -2 : ನಕಾರಾತ್ಮಕವಾಗಿ

ಅಂಶ -3 : ಅಂತಿಮ ಆದೇಶದಂತೆ

ಈ ಕೆಳಗೆ ಕಾಣಿಸಿರುವ

ಕಾರಣಗಳಿಗಾಗಿಃ

**-::ಕಾರಣಗಳು::-**

10. **ಅಂಶ 1 ಮತ್ತು 2 :-** ಈ ಎಲ್ಲಾ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಹಲವು ಅಪರಾಧಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದಲೂ ಮತ್ತು ಅವುಗಳಿಗೆ ನೀಡಲಾಗುವ ಕಾರಣಗಳು ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿ ವಿರುದ್ಧ ಮಾಡಲಾದ ಆಪಾದನೆಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 17 ಸಾಕ್ಷ್ಯಗಳಲ್ಲಿ 7 ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಿದ್ದು, ಒಟ್ಟು 16 ದಾಖಲೆಗಳನ್ನು ನಿಪಿ-1 ರಿಂದ ನಿಪಿ-16 ಎಂದು ನಿಶಾನೆಗೊಳಪಡಿಸಿರುತ್ತಾರೆ.

12. ಅಭಿಯೋಜನೆಯು ಆರೋಪಿಯ ಮೇಲೆ ಹೊರಿಸಲಾಗಿರುವ ಆರೋಪದಂತೆ ಅಪರಾಧವೆಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸಬೇಕಾಗಿರುತ್ತದೆ. ಈ

ಬಗ್ಗೆ ಅಭಿಯೋಜನೆಯು ಹಾಜರುಪಡಿಸಿರುವ ಸಾಕ್ಷ್ಯಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

13. ಈ ಪ್ರಕರಣದಲ್ಲಿ ಪಿರ್ಯಾದುದಾರರಾದ ಪ್ರಾಸಾ-1-ಮಹೇಶ ರವರು ತಮ್ಮ ಸಾಕ್ಷ್ಯದಲ್ಲಿ, ಮೃತ ರಾಜಣ್ಣ ತನ್ನ ತಂದೆ. ದಿನಾಂಕ 18.05.2014 ರಂದು ತಾನು ಮತ್ತು ತನ್ನ ತಂದೆಯವರು ಬೆಳ್ಳಗ್ಗೆ 11.00 ಗಂಟೆ ಸಮಯದಲ್ಲಿ ಶಾಸ್ತ್ರಕ್ಕೆ ಹಂಪಾಪುರ ಗ್ರಾಮಕ್ಕೆ ಹೋಗಿದ್ದೆವು. ತಾನು ಹಂಪಾಪುರದಲ್ಲಿ ಇದ್ದು ತಮ್ಮ ತಂದೆಯವರು ವಾಪಸ್ಸು ಹಂಪಾಪರದಿಂದ ಬರಲು ಟಿ.ವಿ.ಎಸ್. ಎಕ್ಸೆಲ್ ಸೂಪರ್ ಮೊಪೆಡ್ ಬೈಕ್ ನಲ್ಲಿ ಸಮಾರು 5 ಗಂಟೆಯಲ್ಲಿ ತನ್ನ ತಂದೆಯವರಿಗೆ ಅಪಘಾತವಾಗಿದೆ ಎಂದು ಫೋನಿನಲ್ಲಿ ತಿಳಿಸಿರುತ್ತಾರೆ. ಆಗ ಘಟನಾ ಸ್ಥಳವಾದ ಚಾಮರಾಜಗರ-ನಂಜನಗೂಡು ಮುಖ್ಯ ರಸ್ತೆಯ ಮಹದೇವನಗರದ ಬಳಿ ತಾನು ಬಂದು ನೋಡಿದಾಗ ತನ್ನ ತಂದೆ ಕೆ.ಎಸ್.ಅರ್.ಟಿ.ಸಿ ಬಸ್ ಟಿ.ವಿ.ಎಸ್. ಎಕ್ಸೆಲ್ ಸೂಪರ್ ಮೊಪೆಡ್ ಬೈಕ್ ಗೆ ಡಿಕ್ಕಿ ಮಾಡಿದ ಪರಿಣಾಮ ತನ್ನ ತಂದೆ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ತಮ್ಮ ತಂದೆಯ ತಲೆಗೆ ತುಂಬಾ ಏಟು ಆಗಿದ್ದು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂಜನಗೂಡು ಕಡೆಯಿಂದ ಬಸ್ ಬಂದಿರುತ್ತದೆ. ತಮ್ಮ ತಂದೆ ಚಾಮರಾಜನಗರ ಕಡೆಯಿಂದ ಬರುತ್ತಿದ್ದಾಗ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕ ತುಂಬಾ ಸ್ಪೀಡ್ ಆಗಿ ಬಂದು ಚಾಲನೆ ಮಾಡಿದ ಪರಿಣಾಮ ತನ್ನ ತಂದೆ ಮೃತಪಟ್ಟಿರುತ್ತಾರೆ. ದೂರು ನೀಡಿದ ಮಾರನೇ ದಿನ ಪೋಲಿಸರು ಅಪಘಾತದ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಸ್ಥಳದಲ್ಲಿ ತಮ್ಮ ತಂದೆಯ ಬೈಕ್ ಅನ್ನು ಮತ್ತು ಕೆ.ಎಸ್.ಆರ್.ಟಿ.ಸಿ ಬೈಕ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಮಹಜರ್ ಅನ್ನು 11.30 ಗಂಟೆಯಿಂದ 12.30

ಗಂಟೆಯವರೆಗೆ ಮಾಡಿರುತ್ತಾರೆ. ದೂರು ನೀಡಿದ ನಂತರ 13 ದಿನಗಳಾದ ಬಳಿಕ ಬದನವಾಳು ಪೋಲಿಸ್ ಠಾಣೆಗೆ ತಮ್ಮನ್ನು ಕರೆಯಿಸಿ ವಾಹನದ ಚಾಲಕನನ್ನು ದಸ್ತಗಿರಿ ಮಾಡಿದ್ದೇವೆ ಬನ್ನಿ ಎಂದು ಹೇಳಿರುತ್ತಾರೆ. ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಮತ್ತು ತನ್ನ ತಂದೆಯ ಸಾವಿಗೆ ಅವರೇ ಕಾರಣರಾಗಿರುತ್ತಾರೆ. ಕೆ.ಎಸ್.ಆರ್.ಟಿ.ಸಿ ಬಸ್ ನ ಮುಂಭಾಗದ ಮಧ್ಯ ಭಾಗದಿಂದ ಟಿ.ವಿ.ಎಸ್. ಎಕ್ಸೆಲ್ ಮೊಪೆಡ್ ಬೈಕ್ ಗೆ ಗುದ್ದಿರುತ್ತದೆ ಎಂದು ನುಡಿದಿರುತ್ತಾರೆ.

14. ಪ್ರಾಸಾ.2 -ಲೋಕೇಶ ರವರು ತಮ್ಮ ಸಾಕ್ಷ್ಯದಲ್ಲಿ, 2014 ನೇ ಇಸವಿಯಲ್ಲಿ ತಾನು ಅಪಘಾತದ ವಿಚಾರದಲ್ಲಿ ತಾನು ಆಸ್ಪತ್ರೆಯಲ್ಲಿ ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತೇನೆ ಇಷ್ಟು ಬಿಟ್ಟರೆ ತನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

15. ಪ್ರಾಸಾ-5-ಜಿ ಎಸ್ ರಘು ರವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಕಡತವನ್ನು ಚಾಸಾ-16 ರವರಿಂದ ದಿನಾಂಕ 22.05.2014 ರಂದು ರಂದು ಸ್ವೀಕರಿಸಿ ಅದುವರೆಗಿನ ತನಿಖೆಯನ್ನು ಪರಿಶೀಲಿಸಿ, ಅದುವರೆಗಿನ ತನಿಖೆಯು ಸಮಂಜಸವಾದ್ದರಿಂದ ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ-11 ರವರು ಆರೋಪಿಯನ್ನು ಹಾಜರುಪಡಿಸಿದ ಮೇರೆಗೆ ದಸ್ತಗಿರಿ ಕ್ರಮ ಅನುಸರಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಚಾಸಾ-11 ರವರು ಬಸ್ ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಸ್ವೀಕರಿಸಿರುತ್ತೇನೆ. ಚಾಸಾ-11 ರವರಿಂದ ನಷ್ಟ ಭರ್ತಿ ಪ್ರಮಾಣ ಪತ್ರ ಪಡೆದು ಬಸ್ ಅನ್ನು ಅವರ ಮಧ್ಯಂತರ ವಶಕ್ಕೆ ನೀಡಿರುತ್ತೇನೆ. ದಿನಾಂಕ

31.05.2014 ರಂದು ಚಾಸಾ-12 ರವರಿಂದ ಮೃತ ರಾಜಣ್ಣ ರವರ ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ಮತ್ತು 5 ರವರ ಮರು ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಮತ್ತು ಚಾಸಾ-7, 8, 9, 14 ಮತ್ತು 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 12.09.2014 ರಂದು ಚಾಸಾ-13 ರವರಿಂದ ಅಪಘಾತಕ್ಕೆ ಒಳಗಾದ ವಾಹನಗಳ ಎಂ.ವಿ.ಎ ವರದಿಗಳನ್ನು ಸ್ವೀಕರಿಸಿರುತ್ತೇನೆ. ದಿನಾಂಕ 19.05.2014 ರಂದು ಆರೋಪಿ ಮತ್ತು ಚಾಸಾ-9 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಸ್ವೀಕರಿಸಿರುತ್ತೇನೆ. ನಂತರ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.

16. ಪ್ರಾಸಾ-7-ಪೂಣಚ್ಚ ಎನ್ ಎಂ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 18.05.2014 ರಂದು ಸಂಜೆ 7.00 ಗಂಟೆಗೆ ತಾನು ಠಾಣಾ ಉಸ್ತುವಾರಿಯಲ್ಲಿರುವಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 115/2014 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಚಾಸಾ 15 ರವರ ಬೆಂಗಾವಲಿನಲ್ಲಿ ಮೃತರ ಶರೀರವನ್ನು ನಂಜನಗೂಡು ಸರ್ಕಾರಿ ಶವಾಗಾರಕ್ಕೆ ರವಾನಿಸಿರುತ್ತೇನೆ. ದಿಃ 19.05.2014 ರಂದು ನಂಜನಗೂಡು ಸರ್ಕಾರಿ ಶವಾಗಾರದಲ್ಲಿ ಮೃತರ ಶವದ ಮೇಲೆ ಚಾಸಾ 2 ರಿಂದ 4 ರವರ ಸಮಕ್ಷಮ ಶವ ತನಿಖಾವರದಿಯನ್ನು ತಯಾರಿಸಿರುತ್ತೇನೆ ಹಾಗೂ ಚಾಸಾ 5 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಮೃತರ ಮರಣೋತ್ತರ ಪರೀಕ್ಷೆಯ ನಂತರ ಅವರ ದೇಹವನ್ನು

ಚಾಸಾ 1 ರವರಿಗೆ ಹಸ್ತಾಂತರಿಸಿರುತ್ತೇನೆ. ನಂತರ ಅದೇ ದಿನ ಚಾಸಾ 1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ 6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.30 ರವರೆಗೆ ಮಹಜರ್ ಕ್ರಮ ಜರುಗಿಸಿ ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಪಂಚರ ಸಮಕ್ಷಮ ಅಪಘಾತಕ್ಕೊಳಪಟ್ಟ ವಾಹನವನ್ನು ಅಮಾನತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 93/2014 ರಂತೆ ನಮೂದಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 17 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ.

17. ಈ ಪ್ರಕರಣದಲ್ಲಿ ಪಿರ್ಯಾದುದಾರರಾದ ಪ್ರಾಸಾ.1 ರವರು ದೂರುದಾರರಾಗಿದ್ದು, ಅಪಘಾತದ ಬಗ್ಗೆ ತನಗೆ ತನ್ನ ಮಾವ ದೂರವಾಣಿ ಮೂಲಕ ಕರೆ ಮಾಡಿ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ, ಸದರಿ ಮಾವ ಯಾರು, ಆತನ ಹೆಸರು ವಿಳಾಸ ಏನು ಎಂದು ದೂರಿನಲ್ಲಿ ನಮೂದಾಗಿರುವುದಿಲ್ಲ. ಅಭಿಯೋಜನೆಯ ಪ್ರಕಾರ ಪ್ರಾಸಾ.3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಈ ಪ್ರಕರಣದಲ್ಲಿ ತಾನು ಯಾವುದೇ ಘಟನೆಯನ್ನು ಕಣ್ಣಾರೆ ಕಂಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ, ಮಹಜರ್ ಸಾಕ್ಷಿದಾರರಾದ ಪ್ರಾಸಾ.2 ಮತ್ತು 6 ರವರೂ ಸಹ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ.1 ರವರು ತನ್ನ ಪಾಟೀ ಸವಾಲಿನಲ್ಲಿ ಮಹಜರ್ ಗೆ ತಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಈ ಪ್ರಕರಣದಲ್ಲಿ ಮಹಜರ್ ಸಹ ರುಜುವಾತು ಮಾಡುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಉಳಿದಂತೆ, ಪ್ರಾಸಾ.4 ರವರು ಕೆ ಎಸ್ ಆರ್ ಟಿ ಸಿ

ಬಸ್ಸಿನ ನಿರ್ವಾಹಕರಾಗಿದ್ದು, ಬಸ್ಸಿನ ಚಾಲಕ ವಾಹನವನ್ನು ನಿಲ್ಲಿಸಿ ಅಪಘಾತವಾಗಿದೆ ಎಂದು ತಿಳಿಸಿದ್ದು, ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ, ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಮೃತ ತನ್ನ ತಂದೆಗೆ ಡಿ ಎಲ್ ಇರಲಿಲ್ಲ ಎಂದು ತಿಳಿಸಿರುತ್ತಾರೆ. ಹೀಗಿರುವಾಗ, ಆರೋಪಿಯ ನಿರ್ಲಕ್ಷ್ಯತನದಿಂದಲೇ ಅಪಘಾತವಾಗಿದೆ ಎಂದು ಹೇಳುವ ಯಾವುದೇ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ. ಆದ್ದರಿಂದ, ಸಂಶಯದ ಲಾಭವನ್ನು ನಿಸ್ಸಂದೇಹವಾಗಿ ಆರೋಪಿಗೆ ನೀಡಬಹುದಾಗಿದೆ.

18. ಉಳಿದಂತೆ, ಪ್ರಾಸಾ.5 ಮತ್ತು 7 ರವರು ಈ ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ಈ ಪ್ರಕರಣದಲ್ಲಿ ತಾವು ಮಾಡಿದ ತನಿಖೆಯ ಬಗ್ಗೆ ಮಾತ್ರ ಸಾಕ್ಷ್ಯ ನುಡಿದಿದ್ದು, ಅವರ ತನಿಖೆಗೆ ಪೂರಕವಾದಂತಹ ಸ್ವತಂತ್ರ ಸಾಕ್ಷ್ಯಗಳ ಕೊರತೆ ಎದ್ದು ಕಾಣುತ್ತದೆ. ಅಲ್ಲದೇ, ಕೇವಲ ತನಿಖಾಧಿಕಾರಿಗಳ ನುಡಿಸಾಕ್ಷ್ಯವನ್ನು ಆಧರಿಸಿ ಆರೋಪಿಯನ್ನು ತಪ್ಪಿತಸ್ಥನೆಂದು ತೀರ್ಮಾನಿಸಲಾಗದು. ಅಭಿಯೋಜನೆಯು ಅವಶ್ಯಕ ಸಾಕ್ಷ್ಯಾಧಾರಗಳ ಮುಖಾಂತರ ಆರೋಪಿಯ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲಗೊಂಡಿರುತ್ತಾರೆಂದು ಈ ನ್ಯಾಯಾಲಯದ ತೀರ್ಮಾನವಾಗಿರುತ್ತದೆ. ಆದ ಕಾರಣ ಈ ಪ್ರಕರಣದ ಸಂಶಯದ ಲಾಭವನ್ನು ಆರೋಪಿಗೆ ನೀಡುವುದು ಸೂಕ್ತ ಮತ್ತು ಸಮಂಜಸ ಎಂದು ಅಭಿಪ್ರಾಯ ಪಟ್ಟು ಮೇಲಿನ **1 ಮತ್ತು 2 ಅಂಶಗಳನ್ನು ನಕಾರಾತ್ಮಕ** ಎಂದು ಉತ್ತರಿಸಲಾಗಿದೆ.

**19. ಅಂಶ-3:** ಮೇಲೆ ಚರ್ಚಿಸಿರುವ ಅಂಶಗಳಿಗಾಗಿ ಈ ಕೆಳಗಿನಂತೆ,

ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆರೋಪಿಯ ವಿರುದ್ಧ ಭಾ.ದಂ.ಸಂಹಿತೆ ಕಲಂ. 279 ಮತ್ತು 304-ಎ ರಡಿಯಲ್ಲಿ ಮಾಡಲಾದ ಆಪಾದನೆಗಳಿಂದ ಆರೋಪಿಯನ್ನು **ದೋಷ ಮುಕ್ತಗೊಳಿಸಲಾಗಿದೆ.**

ಅಧಿವಿಚಾರಣೆ ಪೂರ್ಣಗೊಳ್ಳುವ ಪೂರ್ವದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಪತ್ರ ಆರೋಪಿಯು ಉನ್ನತ ನ್ಯಾಯಾಲಯದಲ್ಲಿ ಹಾಜರಾಗಲು ಆರೋಪಿಗೆ ಬಂಧನಕಾರಿಯಾಗಿದ್ದು, ಸದರಿ ಜಾಮೀನು ಪತ್ರ ದಂ.ಪ್ರ.ಸಂ. ಕಲಂ. 437 ಎ ರ ಅಡಿಯಲ್ಲಿ ಆರು ತಿಂಗಳುಗಳ ಕಾಲ ಜಾರಿಯಲ್ಲಿರುತ್ತದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **08 ನೇ ಜುಲೈ , 2026** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.

**-ಅನುಬಂಧ-**

1. **ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

| | | |
|---|---|---|
| ಪ್ರಾಸಾ-1 | : | ಮಹೇಶ |
| ಪ್ರಾಸಾ-2 | : | ಲೋಕೇಶ |
| ಪ್ರಾಸಾ-3 | : | ಶಿವಸ್ವಾಮಿ |

| | | |
|---|---|---|
| ಪ್ರಾಸಾ-4 | : | ಚಂದ್ರಶೇಖರ |
| ಪ್ರಾಸಾ-5 | : | ಜಿ ಎಸ್ ರಘು |
| ಪ್ರಾಸಾ-6 | : | ರಮೇಶ |
| ಪ್ರಾಸಾ-7 | : | ಪೂಣಚ್ಚ ಎನ್ ಎಂ |

**2. ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳು:**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ-ಬಿ ) | : | ಸಹಿ |
| ನಿಪಿ-2 | : | ಸ್ಥಳ ಮಹಜರ್ |
| ನಿಪಿ-2(ಎ-ಡಿ ) | : | ಸಹಿ |
| ನಿಪಿ-3 ರಿಂದ 6 | : | ಭಾವಚಿತ್ರಗಳು |
| ನಿಪಿ-7 | : | ಪ್ರಾಸಾ.3 ರವರ ಹೇಳಿಕೆ |
| ನಿಪಿ-8 | : | ಶವತನಿಖಾ ವರದಿ |
| ನಿಪಿ-8(ಎ ) | : | ಸಹಿ |
| ನಿಪಿ-9 | : | ನಿವೇದನಾ ಪತ್ರ |
| ನಿಪಿ-9(ಎ ) | : | ಸಹಿ |
| ನಿಪಿ-10 | : | ಇಂಡೆಮಿನಿಟಿ ಬಾಂಡ್ |
| ನಿಪಿ-11 | : | ಪಿಎಂ ವರದಿ |
| ನಿಪಿ-11(ಎ) | : | ಸಹಿ |
| ನಿಪಿ-12 | : | ಐಎಂವಿ ವರದಿ |
| ನಿಪಿ-12 (ಎ) | : | ಸಹಿ |
| ನಿಪಿ- 13 | : | ಪ್ರಾಸಾ.4 ರವರ ಹೇಳಿಕೆ |
| ನಿಪಿ-14 | : | ಕರ್ತವ್ಯ ದೃಡೀಕರಣ ಪತ್ರ |
| ನಿಪಿ-14(ಎ) | : | ಸಹಿ |
| ನಿಪಿ-15 | : | ಪ್ರಥಮ ವರ್ತಮಾನ ವರದಿ |

| | | |
|---|---|---|
| ನಿಪಿ-15(ಎ) | : | ಸಹಿ |
| ನಿಪಿ-16 | : | ಕಚ್ಚಾ ನಕಾಶೆ |
| ನಿಪಿ-16(ಎ) | : | ಸಹಿ |

**3. ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳು:**

- ಇಲ್ಲಾ -

**4. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

**5. ಆರೋಪಿತರ ಪರ ಗುರುತಿಸಲಾದ ದಾಖಲೆಗಳು:**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,

**ನಂಜನಗೂಡು**